## ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.

## ಸಿ.ಸಿ. ಸಂಖ್ಯೆ: 228 /2023

**ಸಾಕ್ಷಿಯನ್ನು ದಿಃ 22.01.2026 ರಂದು ಕರೆಸಿ ಪ್ರಮಾಣವಚನ ಬೋದಿಸಲಾಯಿತು.**

| | | |
|---|---|---|
| ಹೆಸರು | ಲಕ್ಷ್ಮಣ | ಡಿ.ಡಬ್ಲ್ಯೂ: 1 |
| ತಂದೆಯ ಹೆಸರು | ವೆಂಕಟೇಗೌಡ | |
| ವಯಸ್ಸು | 51 ವರ್ಷ | |
| ಕೆಲಸ | ವ್ಯಾಪಾರ | |
| ವಾಸಸ್ಥಳ | ಕಟ್ಟೆಮುಳಲವಾಡಿ | |

## ಮುಖ್ಯ ವಿಚಾರಣೆಃ ಆರೋಪಿ ಪರ ಶ್ರೀ. MRH ವಕೀಲರಿಂದ

ನನಗೆ ಫಿರ್ಯಾದುದಾರರು ಗೊತ್ತಿಲ್ಲ. ನಿಪಿ-1ರ ಖಾಲಿ ಚೆಕ್ಕನ್ನು ಸಹಿ ಹಾಕಿ ನನ್ನ ವ್ಯಾಪಾರಾದ ಪಾಲುದಾರರಾದ ಹುಣಸೂರು ಪಟ್ಟಣದ ಕರೀಗೌಡರ ಬೀದಿಯ ವಾಸಿಯಾದ ರಮೇಶ್ ಅಲಿಯಾಸ್ ಕುಟ್ಟೆರಮೇಶ ಎನ್ನುವವರಿಗೆ ಕೊಟ್ಟಿದ್ದೆ. ಸದರಿ ಚೆಕ್ಕನ್ನು 2017 ರಲ್ಲಿ ಕೊಟ್ಟಿದ್ದೆ. ಅದನ್ನು ಹಣಕಾಸಿನ ವ್ಯವಹಾರದ ಸಲುವಾಗಿ ಕೊಟ್ಟಿದ್ದೆ. ನನ್ನ ಮತ್ತು ಮೇಲೆ ಹೇಳಿದ ರಮೇಶ ರವರ ಮಧ್ಯೆ ಇದ್ದ ಹಣಕಾಸಿನ ವ್ಯವಹಾರ 2017-2018ರಲ್ಲಿ ಮುಕ್ತಾಯವಾಯಿತು. ನಾನು ರಮೇಶ್ ರವರ ಬಳಿ ನನ್ನ ಚೆಕ್ಕನ್ನು ವಾಪಸ್ಸು ಕೊಡುವಂತೆ ಕೇಳಿದಾಗ ಕೊಡುತ್ತೇನೆ ಎಂದು ಹೇಳುತ್ತಾ ಬಂದರು. ನನ್ನ ಮತ್ತು ಅವರ ಪಾಲುಗಾರಿಕೆ ಈಗಲೂ ಕೂಡ ಮುಂದುವರಿದಿದೆ. State Bank of Mysore, State Bank of India ದೊಂದಿಗೆ ವಿಲೀನಗೊಂಡ ಕಾರಣ ಚೆಕ್ಕನ್ನು ನಾನು ಕೇಳಲು ಹೋಗಲಿಲ್ಲ. ನನಗೆ ಫಿರ್ಯಾದುದಾರರಿಂದ ನೋಟೀಸ್ ಬಂತು. ಆ ನೋಟೀಸ್ ನಲ್ಲಿ ನಾನು ರಮೇಶ್ ರವರಿಗೆ ನೀಡಿದ ಚೆಕ್ಕಿನ ಬಗ್ಗೆ ಹೇಳಲಾಗಿತ್ತು. ಸದರಿ ಚೆಕ್ಕಿನಲ್ಲಿ ರೂ.4 ಲಕ್ಷವನ್ನು ಫಿರ್ಯಾದುದಾರರ ಹೆಸರಿಗೆ ನಮೂದಿಸಲಾಗಿತ್ತು. ನಾನು ನೋಟೀಸ್ ಸ್ವೀಕರಿಸಿದ ನಂತರ ರಮೇಶ್ ರವರ ಬಳಿ ಹೋಗಿ ಕೇಳಿದೆ. ನನ್ನ ಮತ್ತು ರಮೇಶ್ ರವರ ಮಧ್ಯೆ ಪಾಲುಗಾರಿಕಾ ವ್ಯವಹಾರದ ಬಗ್ಗೆ ಬಿನ್ನಾಭಿಪ್ರಾಯ ಬಂದಿತ್ತು. ನಾನು ನೋಟೀಸ್ ಬಗ್ಗೆ ಕೇಳಿದಾಗ ಹಾಗೇಯೇ ಹಾಕಿಸಿದ್ದೇನೆ ವಾಪಸ್ಸು ತೆಗೆಯಲು ಹೇಳುತ್ತೇನೆ ಎಂದು ಹೇಳಿದರು. ನಂತರ

ನನಗೆ ಈ ಕೇಸನ್ನು ಹಾಕಿದ ಬಗ್ಗೆ ಗೊತ್ತಾಯಿತು. ನಿಪಿ-1 ರ ಖಾಲಿ ಚೆಕ್ಕನ್ನು ನಾನು ಕೊಟ್ಟಿದ್ದೆ. ನಾನು ಫಿರ್ಯಾದುದಾರರಿಂದ ಯಾವುದೇ ಸಾಲ ಪಡೆದುಕೊಂಡಿಲ್ಲ. ನನ್ನ ಮತ್ತು ಫಿರ್ಯಾದುದಾರರ ಮಧ್ಯೆ ಯಾವುದೇ ಹಣಕಾಸಿನ ವ್ಯವಹಾರ ನಡೆದಿಲ್ಲ. ನೋಟೀಸ್ ಸ್ವೀಕರಿಸಿದ ನಂತರ ನಾನು ರಮೇಶ್ ರವರ ಬಳಿ ಕೇಳಿದಾಗ ಮುಂದುವರಿಯುವುದಿಲ್ಲ ಎಂದು ಅವರು ಹೇಳಿದ್ದ ಕಾರಣ ನಾನು ನೋಟೀಸಿಗೆ ಉತ್ತರವನ್ನು ಕೊಡಲಿಲ್ಲ. ನನಗೆ ತೊಂದರೆ ಕೊಡಬೇಕೆಂದು ಈ ಪ್ರಕರಣವನ್ನು ದಾಖಲಿಸಲಾಗಿದೆ. ಆದ್ದರಿಂದ ನನ್ನನ್ನು ಈ ಪ್ರಕರಣದಿಂದ ಬಿಡುಗಡೆ ಮಾಡಬೇಕೆಂದು ಪ್ರಾರ್ಥಿಸುತ್ತೇನೆ.

ಪಾಟೀ ಸವಾಲುಃ ಫಿರ್ಯಾದುದಾರರ ಪರ ಕು.MR ವಕೀಲರಿಂದಃ-

ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು, ಕೋರಿಕೆ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ., ಹುಣಸೂರು